ನೀಲಿಯಾಗಿದ್ದುವೆಂದರೆ, ಹೆಚ್ಚು ಬೆಳಕಿಲ್ಲದಿದ್ದರೂ ಅವು ಸ್ಪಷ್ಟವಾಗಿ ಕಾಣಿಸುತ್ತಿದ್ದುವು. ಪುಸ್ತಕಕ್ಕಿಂತ ಹೆಚ್ಚಾಗಿ ಕೊನ್ಸಾಂವ್ ಹಾಜರಿಯೇ ನನ್ನನ್ನ ಎಚ್ಚರವಾಗಿಟ್ಟಿರುವ ಕೆಲಸ ಮಾಡಿತ್ತೆನ್ನಬಹುದು. ನಾನು ನನಗೆ ತೋಚಿದ್ದನ್ನ ಮಾತಾಡುತ್ತಿದ್ದೆ. ದೇಶದಲ್ಲಿ ಪವಿತ್ರದಿನಗಳ ಬಗ್ಗೆ ಅಥವಾ ನನ್ನ ಮನಸ್ಸಿಗೆ ತೋಚಿದ ವಿಷಯಗಳೆಲ್ಲವೂ ನನ್ನ ತುಟಿಗಳ ಮೇಲೆ ಅಡ್ಡಾಡಿದವು. ಒಂದು ವಿಷಯದಿಂದ ಮತ್ತೊಂದಕ್ಕೆ ವಿಷಯಾಂತರವನ್ನೂ ಮಾಡಿದೆ. ಒಮ್ಮೊಮ್ಮೆ ಚರ್ಚಿಸಿದ್ದನ್ನೇ ಮತ್ತೆ ಚರ್ಚಿಸಿದೆ. ಅವಳ ಹೊಳೆವ ಅಚ್ಚುಕಟ್ಟಾದ ಬಿಳಿಯ ಹಲ್ಲುಗಳನ್ನು ನೋಡಲು ಅವಳನ್ನು ನಗಿಸುವ ಸಲುವಾಗಿ ನಾನೂ ನಕ್ಕೆ. ಅವಳ ಕಂಗಳು ಕಪ್ಪಾಗಿರಲಿಲ್ಲವಾದರೂ ಗಾಢ ಬಣ್ಣದ್ದಾಗಿತ್ತು. ಅವಳ ಮೂಗು ಸಣ್ಣಗೆ ತುಸು ವಕ್ರವಾಗಿದ್ದು ಅವಳ ಮುಖದಲ್ಲಿ ಒಂದು ಪ್ರಶ್ನಾರ್ಥಕ ಚಿನ್ಹೆಯ ಲಕ್ಷಣವನ್ನು ಕೊಟ್ಟಿತ್ತು. ನಾನು ದನಿಯೇರಿಸಿದಾಗಲೆಲ್ಲ ಆಕೆ ನನ್ನನ್ನು ಗುಸುಗುಸು ದನಿಗೆ ಕರೆತರಲು ಪ್ರಯತ್ನಿಸಿದಳು.

'ಮೆಲ್ಲಗೆ... ಅಮ್ಮ ಎದ್ದು ಬಿಡಬಹುದು'

ಅವಳು ಆ ಜಾಗದಿಂದ ಅಲುಗಾಡಲಿಲ್ಲ ಎನ್ನುವುದು ನನಗೆ ತುಂಬಾ ಖುಷಿಯನ್ನು ಕೊಟ್ಟಿತು. ನಮ್ಮ ಮುಖಗಳು ನಿಜಕ್ಕೂ ಹತ್ತಿರದಲ್ಲಿದ್ದುವು. ಗಟ್ಟಿಯಾಗಿ ಮಾತಾಡುವ ಅವಶ್ಯಕತೆಯಿಲ್ಲದಷ್ಟು ಹತ್ತಿರದಲ್ಲಿದ್ದುವು. ಇಬ್ಬರೂ ಗುಸುಗುಸು ಮಾಡಿದೆವು. ನನಗೇ ಹೆಚ್ಚು ಹೇಳುವುದಿತ್ತಾದ್ದರಿಂದ ನನ್ನ ಪಿಸುಗುಟ್ಟುವಿಕೆಯೇ ಹೆಚ್ಚಿತ್ತು. ಆಗಾಗ ಆಕೆ ಗಂಭೀರಳಾಗಿ ಬಿಡುತ್ತಿದ್ದಳು. ಎಷ್ಟು ಗಂಭೀರವೆಂದರೆ ಅವಳ ಹುಬ್ಬುಗಳು ವಕ್ರವಾಗುತ್ತಿದ್ದುವು. ಸ್ವಲ್ಪ ಸಮಯದ ನಂತರ ಹಾಗೆ ನಿಲ್ಲುವುದು ಅವಳಿಗೆ ಕಷ್ಟವಾಗಿ ಅವಳು ನಿಂತಿದ್ದ ಜಾಗವನ್ನೂ, ರೀತಿಯನ್ನೂ ಬದಲಾಯಿಸಿದಳು. ಮೇಜನ್ನು ಬಳಸಿ ಬಂದು ಸೋಫಾದ ಮೇಲೆ ಕೂತಳು. ನಾನು ತಿರುಗಿ ನೋಡಿದಾಗ ಅವಳ ಚಪ್ಪಲಿಗಳ ಅಂಚು ಮಾತ್ರ ಕಂಡಿತು. ಅದೂ ಅವಳು ಕೂಡುವುದಕ್ಕೆ ತೆಗೆದುಕೊಂಡ ಒಂದು ಕ್ಷಣದ ಮಟ್ಟಿಗೆ ಮಾತ್ರ. ಆಕೆಯ ಗೌನು ಉದ್ದಕ್ಕಿದ್ದು ಕೂತಕೂಡಲೇ ಕಾಲುಗಳನ್ನು ಗೌನು ಮುಚ್ಚಿತ್ತು. ಚಪ್ಪಲಿಗಳು ಕಪ್ಪು ಬಣ್ಣದ್ದೆಂದು ನನ್ನ ನೆನಪು. ಕೊನ್ಸಾಂವ್ ಮೃದುವಾಗಿ ಹೇಳಿದಳು:

'ಅಮ್ಮನ ಕೋಣೆ ದೂರದಲ್ಲಿದೆ. ಆದರೆ ಅಮ್ಮನದ್ದು ಹಗುರವಾದ ನಿದ್ದೆ. ಅವಳು ಈಗೇನಾದರೂ ಎದ್ದರೆ ಮತ್ತೆ ನಿದ್ದೆಬರಲು ಸಾಕಷ್ಟು ಸಮಯ ಹಿಡಿಯುತ್ತದೆ'.

'ನನಗೂ ಹಾಗೇ. ಎಚ್ಚರವಾದರೆ ನಿದ್ದೆ ಬರೋದಿಲ್ಲ'

'ಏನು?' ಸರಿಯಾಗಿ ಕೇಳಿಸಲೆಂದು ಮುಂದಕ್ಕೆ ಬಗ್ಗಿದಳು.

ನಾನು ನನ್ನ ಕುರ್ಚಿಯನ್ನು ಅವಳ ಸೋಫಾದ ಪಕ್ಕಕ್ಕೆಳೆದು ಹೇಳಿದ್ದನ್ನು ಪುನರುಚ್ಚರಿಸಿದೆ. ಈ ಕಾಕತಾಳೀಯತೆಯನ್ನು ಕಂಡು ಆಕೆ ನಕ್ಕಳು. ಆಕೆಯ ನಿದ್ದೆಯೂ ಹಗುರವಾಗಿತ್ತಂತೆ. ನಾವೆಲ್ಲರೂ ಹಗುರ ನಿದ್ದೆಯ ಜನ...

'ನಾನೂ ಅಮ್ಮನ ಹಾಗೆ. ನಿದ್ದೆಯಿಂದ ಎದ್ದರೆ ಮತ್ತೆ ನಿದ್ದೆ ಬರೋದಿಲ್ಲ. ಹಾಸಿಗೆಯಲ್ಲಿ ಹೊರಳುತ್ತೇನೆ, ಎದ್ದು ಕ್ಯಾಂಡಲ್ ಬೆಳಗಿಸುತ್ತೇನೆ. ನಡೆದಾಡುತ್ತೇನೆ. ಮತ್ತೆ ಅಡ್ಡಾಗುತ್ತೇನೆ. ಆದರೆ ಏನೂ ಆಗೋದಿಲ್ಲ'

'ಇಂದಿನ ಹಾಗೆ'.

'ಇಲ್ಲ, ಇಲ್ಲ' ಆಕೆ ತಕ್ಷಣಕ್ಕೆ ಹೇಳಿದಳು.

ಆಕೆ ಯಾಕೆ ಅಲ್ಲಗಳೆಯುತ್ತಿದ್ದಾಳೆ ಅನ್ನೋದು ನನಗೆ ಅರ್ಥವಾಗಲಿಲ್ಲ. ಅವಳಿಗೂ ಆಗಲಿಲ್ಲ ಅನ್ನಿಸುತ್ತದೆ. ಗೌನಿನ ನಡುಪಟ್ಟಿಯ ಅಂಚುಗಳನ್ನು ತೆಗೆದು ತನ್ನ ತೊಡೆಗಳ ಮೇಲೆ ಬಾರಿಸಿಕೊಂಡಳು ಅಥವಾ ಬಲಗಾಲಿನ ತೊಡೆಯೆಂದು ಹೇಳಬೇಕು – ಏಕೆಂದರೆ ಅವಳು ಎಡಗಾಲಿನ ಮೇಲೆ ಬಲಗಾಲನ್ನು ಹಾಕಿ ಕೂತಿದ್ದಳು. ನಂತರ ಆಕೆ ಕನಸುಗಳ ಬಗ್ಗೆ ಮಾತಾಡಿದಳು. ಅವಳ ಜೀವಮಾನದಲ್ಲಿ ಒಮ್ಮೆ ಮಾತ್ರ ದುಃಸ್ವಪ್ನ ಬಿದ್ದಿತ್ತು ಎಂದು ಹೇಳಿದಳು... ಅದೂ ಅವಳ ಬಾಲ್ಯಕಾಲದಲ್ಲಿ. ನನಗೆ ದುಃಸ್ವಪ್ನಗಳು ಬೀಳುತ್ತವಾ ಎಂದು ಕುತೂಹಲದಿಂದ ಕೇಳಿದಳು. ಹೀಗೆ ನಮ್ಮ ಮಾತುಕತೆ ಹಾದಿ ತಪ್ಪಿ, ಮತ್ತೆ ಹಳಿಯಮೇಲೆ ಬರುತ್ತಾ ನಿರಂತರವಾಗಿ ಮುಂದುವರೆದಿತ್ತು. ನಾನದರಲ್ಲಿ ಎಷ್ಟು ತೊಡಗಿದ್ದೆನೆಂದರೆ ಪ್ರಾರ್ಥನೆಯ ಸಮಯವನ್ನು ಮರೆತುಬಿಟ್ಟೆ. ಏನಾದರೂಂದು ಮಾತು ಮುಗಿಯುವಷ್ಟರಲ್ಲಿ ಅವಳು ಯಾವುದಾದರೂ ಹೊಸ ಪ್ರಶ್ನೆಯನ್ನು ಕೇಳಿ ಮಾತು ಮುಂದುವರಿಯುವಂತೆ ಮಾಡುತ್ತಿದ್ದಳು. ಅಲ್ಲಿಂದ ನಾನು ಮತ್ತೆ ನನ್ನ ರಾಮಾಯಣ ಸುರು ಮಾಡುತ್ತಿದ್ದೆ. ಆಗಾಗ ಆಕೆ ನನ್ನನ್ನು ಎಚ್ಚರಿಸುತಲಿದ್ದಳು....

'ಮೆಲುದನಿಯಲ್ಲಿ, ಅಷ್ಟು ಗಟ್ಟಿಯಾಗಿ ಅಲ್ಲ'